# ಬೆಂಗಳೂರಿನಲ್ಲಿ ಕೇಬಲ್ ಕಾರುಗಳು



ಬೆಂಗಳೂರಿನ ವಿಪರೀತ ಸಂಚಾರ ದಟ್ಟಣೆಯಲ್ಲಿ ಸಿಕ್ಕಿಹಾಕಿಕೊಂಡಾಗ, 'ನಮ್ಮ ಕಾರಿಗೆ ರೆಕ್ಕೆಗಳು ಇದ್ದಿದ್ದರೆ ಈ ದಟ್ಟಣೆ ವ್ಯೂಹದಿಂದಲೇ ಹಾರಿಕೊಂಡು ಹೋಗಬಹುದಿತ್ತು..' ಎಂಬ ಯೋಚನೆ ಮೂಡುವುದು ಸಹಜ. ಕಾರಿನಲ್ಲಿ ಹಾರುವ ಕನಸು ಕೈಗೂಡದಿದ್ದರೂ ಕೇಬಲ್ ಕಾರಿನಲ್ಲಿ ಜಾರುತ್ತಾ ಹೋಗುವ ಅವಕಾಶವನ್ನಾದರೂ ನಗರದ ನಾಗರಿಕರಿಗೆ ಒದಗಿಸಿಕೊಡಬೇಕು ಎನ್ನುವ ಆಲೋಚನೆ ಈಗ ರಾಜ್ಯ ಸರ್ಕಾರಕ್ಕೆ ಬಂದಿದೆ. ಸರ್ಕಾರದ ಈ ಯೋಜನೆ ಕೈಗೂಡಿದರೆ ಪ್ರವಾಸಿ ತಾಣದಲ್ಲಿ ಮಾತ್ರ ಕಾಣಸಿಗುತ್ತಿದ್ದ ಕೇಬಲ್ ಕಾರುಗಳು ಬೆಂಗಳೂರಿನ ಆಗಸದಲ್ಲೂ ಹರಿದಾಡಲಿವೆ! ನಗರದ ಟ್ರಾಫಿಕ್ ದಟ್ಟಣೆಯ ಪರಿಹಾರಕ್ಕೆ ಇನ್ನೊಂದು ದಾರಿ ತೆರೆಯಲಿದೆ.

ನವದೆಹಲಿ ಮೂಲದ ಪೋಮಾ ಸಂಸ್ಥೆ ನಗರದಲ್ಲಿ ಕೇಬಲ್ ಕಾರುಗಳ ವ್ಯವಸ್ಥೆಗೆ ಸಂಬಂಧಿಸಿದಂತೆ ಕೆಲವು ದಿನಗಳ ಹಿಂದೆ ರಾಜ್ಯ ಸರ್ಕಾರಕ್ಕೆ ಮಾಹಿತಿ ಒದಗಿಸಿದೆ. ಬೆಂಗಳೂರಿನಲ್ಲಿ ಮೆಟ್ರೊ ರೈಲು ಹಾಗೂ ಮೇಲ್ಸೇತುವೆಗಳ ಸೌಲಭ್ಯ ಒದಗಿಸಿದರೂ ನಿರೀಕ್ಷಿತ ಪ್ರಮಾಣದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಸಾಧ್ಯವಾಗಿಲ್ಲ ಎನ್ನುವುದು ಹಿರಿಯ ಅಧಿಕಾರಿಗಳ ಅಭಿಪ್ರಾಯವಾಗಿದೆ. ಸಂಚಾರ ದಟ್ಟಣೆ ಕಡಿಮೆಗೊಳಿಸಲು ಬೇರೆ ದಾರಿಗಳತ್ತ ಚಿಂತನೆ ನಡೆಸಿದಾಗ ಹೊಳೆದದ್ದೇ ಕೇಬಲ್ ಕಾರು.

'ನಗರಗಳಲ್ಲೂ ಕೇಬಲ್ ಕಾರುಗಳ ವ್ಯವಸ್ಥೆ ಮಾಡುವಂತಹ ತಂತ್ರಜ್ಞಾನ ನಮ್ಮ ಬಳಿಯಿದೆ. ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ಅವರಿಗೆ ಯೋಜನೆಯ ಸಂಪೂರ್ಣ ಮಾಹಿತಿ ನೀಡಿದ್ದೇವೆ. ಅವರಿಂದ ಆಶಾದಾಯಕ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸರ್ಕಾರದಿಂದ ಅನುಮತಿ ಸಿಕ್ಕರೆ ನಗರದಲ್ಲಿ ಸಮಗ್ರ ಸಮೀಕ್ಷೆ ನಡೆಸಿ, ಎಲ್ಲೆಲ್ಲಿ ಕೇಬಲ್

ಜಗತ್ತಿನಲ್ಲಿ ವಾಹನಗಳ ಸಂಖ್ಯೆ **120** ಕೋಟಿ ದಾಟಿದೆ.

ಹಾರಾಡುವಾಗ ಉಂಟಾಗುವ ಭಾರೀ ಸೈರನ್. ಸುಮ್ಮನೆ ಊಹಿಸಿಕೊಳ್ಳಿ ಬೆಂಗಳೂರಿನ ಬಾನಂಗಳದ ತುಂಬ ಕಟ್ಟಡಗಳ ಸ್ವಲ್ಪವೇ ಮೇಲೆ ಹತ್ತಾರು ಹಾರುವ ಕಾರುಗಳು ಹಾರಾಡುತ್ತಿದ್ದರೆ ಭೋರ್ಗರೆವ ಶಬ್ದದಿಂದ ಕೆಳಗೆ ವಾಸಿಸುತ್ತಿರುವ, ಓಡಾಡುತ್ತಿರುವ ಜನರು ಓಡಿ ಹೋಗಲಿಕ್ಕಿಲ್ಲವೆ?

ಹಾರುವ ಕಾರುಗಳ ಅಗತ್ಯ ಈಗ ಹಿಂದೆಂದಿಗಿಂತಲೂ ಹೆಚ್ಚಾಗಿದೆ ಎನ್ನುವುದು ನಿಜ. ಮಹಾನಗರಗಳಲ್ಲಿ ಟ್ರಾಫಿಕ್ ಜಾಮ್ ಉಂಟು ಮಾಡುತ್ತಿರುವ ಕಿರಿಕಿರಿಯನ್ನು ಬಣ್ಣಿಸಲು ಶಬ್ದಗಳು ಸಾಲುವುದಿಲ್ಲ. ಟ್ರಾಫಿಕ್ ಜಾಮ್ ಉಂಟು ಮಾಡುತ್ತಿರುವ ಮಾನವ ಗಂಟೆಗಳ ಪೋಲು ಲೆಕ್ಕಕ್ಕೆ ಸಿಗುವುದಿಲ್ಲ. ಜತೆಗೆ ರಸ್ತೆ ಅಪಘಾತಗಳ ಸಂಖ್ಯೆಯೂ ಒಂದೇ ಸಮನೆ ಏರುತ್ತಿದೆ. ಅಪಘಾತಗಳಿಂದ ಸಾವುನೋವು, ಟ್ರಾಫಿಕ್ ಟೆನ್ಶನ್‌ನಿಂದ ಅನಾರೋಗ್ಯ, ಅಧಿಕ ರಕ್ತದೊತ್ತಡ, ಮಾನಸಿಕ ಕ್ಲೇಶ ಹೀಗೆ ಪಟ್ಟಿ ಮಾಡಿದರೆ ತೊಂದರೆಗಳು ಉದ್ದಕ್ಕೆ ಬೆಳೆಯುತ್ತವೆ.

